ಆಟೊಮೊಬೈಲ್

# ಮುಂದೆಲ್ಲ ಕನೆಕ್ಟೆಡ್ ಕಾರುಗಳ ಕಾಲ!




ಎಲ್ಲಿ ನೋಡಿದರೂ ಕಾರುಗಳದೇ ಕಾರುಬಾರು. ಅವುಗಳ ವೈವಿಧ್ಯ ಸರಣಿಗೆ ಕನೆಕ್ಟೆಡ್ ಕಾರುಗಳೂ ಸೇರುತ್ತಿವೆ. ಹಾಗೆಂದರೆ ಏನು? ಅವು ಹೇಗೆ ಕಾರ್ಯನಿರ್ವಹಿಸುತ್ತವೆ, ಮೊದಲ ಕಾರಿಗಿಂತ ಹೇಗೆ ಭಿನ್ನ. ಅವೇ ಭವಿಷ್ಯದ ಸಾಧಿಗಳು ಎನ್ನುತ್ತಾರಲ್ಲ ಏಕಿರಬಹುದು ಎನ್ನುವ ವಿವರ.

■ ಕವಿತ ಸಿದ್ದೇಗೌಡ

ಭಾನುವಾರ 2019ರ ಆ ದಿನ, ದಿಶಾ ಗೆಳತಿ ಮನೆಗೆ ಪಾರ್ಟಿಗೆ ಹೋಗಿದ್ದಳು. ಗೆಳತಿಯರ ಜೊತೆ ಹಾಡು, ನೃತ್ಯ, ಹರಟೆ ಹೊಡೆದು ಊಟ ಮಾಡಿ, ಹಿಂತಿರುಗುವಾಗ ರಾತ್ರಿ 10 ಗಂಟೆಯಾಗಿದೆ. ಮನೆ ತಲುಪುತ್ತಿದಂತೆ ಮರುದಿನ 9ಗಂಟೆಗೆ ಒಂದು ಮುಖ್ಯವಾದ ಸಭೆ ಇದೆ ಎನ್ನುವುದು ನೆನಪಾಯಿತು. ತರಾತುರಿಯಲ್ಲಿ ತನ್ನ ಕಾರನ್ನು ನಿಲ್ಲಿಸಿದಳು. ಮನೆ ಹೊಕ್ಕವಳಿಗೆ ಬೆಳಿಗ್ಗೆ ಮಾಡಬೇಕಾದ ಕೆಲಸಗಳೆಲ್ಲ ಒಂದರ ನಂತರ ಒಂದು ನೆನಪಾದವು. ಬೆಳಿಗ್ಗೆ ಬೇಗ ಎದ್ದೇಳಬೇಕು, ಅಡುಗೆ ಮುಗಿಸಿ, ತನಗೆ, ಮಕ್ಕಳಿಗೆ ಮತ್ತು ಗಂಡನಿಗೆ ಮಧ್ಯಾಹ್ನದ ಊಟಕ್ಕೆ ಏನು ಪ್ಯಾಕ್ ಮಾಡಬೇಕು, ಸಮಯಕ್ಕೆ ಸರಿಯಾಗಿ ಕಚೇರಿ ತಲುಪಲು ಎಷ್ಟು ಸಮಯಕ್ಕೆ ಹೊರಡಬೇಕು? ಮನೆಯಿಂದ ಬೇಗನೆ ಹೊರಟು ಕಚೇರಿಗೆ ತಲುಪಬೇಕು ಎಂದು ಯೋಚಿಸುತ್ತಾ ಲಘುಬಗೆಯಿಂದ ಗಂಡ ಮತ್ತು ಮಕ್ಕಳಿಗೆ ಶುಭ ರಾತ್ರಿ ಹೇಳಿ ಮಲಗಿದಳು.

ಮರುದಿನ ಬೇಗನೆ ಎದ್ದು ಅಡುಗೆ ಮುಗಿಸಿ ಕಚೇರಿಗೆ ಹೊರಡಲು ತಯಾರಾದ ನಂತರ ಕಾರಿನಲ್ಲಿ ಕುಳಿತು ಇಗ್ನಿಷನ್ ಆನ್ ಮಾಡಲು ಹೋದಾಗ ಕಾರು ಸ್ಟಾರ್ಟ್ ಆಗಲಿಲ್ಲ. ಹಿಂದಿನ ರಾತ್ರಿ ಅವಳು ಕಚೇರಿಯ ಬಗ್ಗೆ ಯೋಚಿಸುತ್ತಾ ಕಾರಿನ ದೀಪಗಳ ಸ್ವಿಚ್ ಆಫ್ ಮಾಡಲು ಮರೆತಿದ್ದಳು. ರಾತ್ರಿಯಿಡೀ ಕಾರಿನ ಒಳಗಿನ ದೀಪ ಆನ್ ಆಗಿ ಬ್ಯಾಟರಿ ಖಾಲಿಯಾಗಿತ್ತು. ತನ್ನ ಮೇಲೆಯೇ ಕೋಪ ಬಂತು. ಗಂಡನಿಗೆ ತಿಳಿದರೆ ಅವನು ನನ್ನನ್ನೇ ದೂಷಿಸುತ್ತಾನೆ. ಟ್ರಾಫಿಕ್ ಜಾಸ್ತಿ ಆಗುವ ಮೊದಲೇ ಕಚೇರಿ ತಲುಪಿದರೆ ಸಾಕೆಂದು ತಕ್ಷಣವೇ ಟ್ಯಾಕ್ಸಿ, ಆಟೊ ಹುಡುಕಲು ಪ್ರಾರಂಭಿಸಿದಳು. ಸಮಯಕ್ಕೆ ಸರಿಯಾಗಿ ಟ್ಯಾಕ್ಸಿ ಸಿಗುತ್ತಿಲ್ಲ. ಕೊನೆಗೆ ಡ್ರೈವರ್ ಒಬ್ಬ ಹೆಚ್ಚುವರಿ ಹಣ ನೀಡುವುದಾಗಿ ಹೇಳಿದಾಗ ಕಚೇರಿಗೆ ಬಿಡಲು ಒಪ್ಪಿಕೊಂಡ. ಕೊನೆಗೂ 10 ನಿಮಿಷ ತಡವಾಗಿ ಕಚೇರಿ ತಲುಪಿದಳು.

ಸಂಜೆ ಹಿಂತಿರುಗಿ ಬರುವಷ್ಟರಲ್ಲಿ ಅವಳ ಗಂಡ ಮೆಕ್ಯಾನಿಕ್ ಕರೆಸಿ ಕಾರ್ ಬ್ಯಾಟರಿ ಚಾರ್ಜ್ ಮಾಡಿಸಿದ್ದ. ಮನೆಯೊಳಗೆ ಹೆಜ್ಜೆ ಇಡುತ್ತಿದ್ದಂತೆ ಡ್ರೈವಿಂಗ್ ಬಗ್ಗೆ ಉಪದೇಶದ ಜೊತೆ ಭಾನುವಾರದ ಬದಲು ಶನಿವಾರ ನೀವು ಏಕೆ ಪಾರ್ಟಿ ಮಾಡಬಾರದು? ಎನ್ನುವ ಮಾತುಗಳನ್ನು ಕೇಳುವಂತಾಯಿತು. 'ಕೆಲವರು ಶನಿವಾರ ಕೆಲಸ ಮಾಡುತ್ತಾರೆ, ಅದಕ್ಕಾಗಿಯೇ ಭಾನುವಾರ ಸಂಜೆ ಒಟ್ಟಿಗೆ ಸೇರಲು ನಿರ್ಧರಿಸಿದ್ದು' ಎಂದು ದಿಶಾ ಹೇಳುತ್ತಿದ್ದರೂ ಅವನ ಉಪನ್ಯಾಸ ಮುಂದುವರಿದಿತ್ತು. ಮೌನವಾದ ಆಕೆ ರೂಮಿನೊಳಗೆ ಹೋದಳು.

### 2026ರ ಈ ಭಾನುವಾರ

ಇವತ್ತು ಕೂಡ ದಿಶಾ ಗೆಳತಿಯ ಮನೆಯಿಂದ ರಾತ್ರಿ ತಡವಾಗಿ ಬಂದಳು. ಆಕೆ ಮಲಗುವ ಮುನ್ನ ಫೋನ್‌ನಲ್ಲಿ ಮೊಬೈಲ್ ಅಪ್ಲಿಕೇಶನ್ ನೋಡಿದಳು. ಕಾರಿನ ಬಾಗಿಲು ಲಾಕ್ ಆಗಿಲ್ಲ, ಹಿಂಭಾಗದ ಲೈಟ್ ಆನ್ ಆಗಿದೆ ಎಂದು ಸೂಚನೆ ನೀಡಿತು. ಅವಳು ತಕ್ಷಣ ಮೊಬೈಲ್‌ನಿಂದಲೇ ಲೈಟ್ ಆಫ್ ಮಾಡಿ ತನ್ನ ಕಾರನ್ನು ಲಾಕ್ ಮಾಡಿದಳು. ಮರುದಿನ ಬೆಳಗಿನ ಅಡುಗೆಯನ್ನೆಲ್ಲಾ ಮುಗಿಸಿ, ಸಮಯಕ್ಕೆ ಸರಿಯಾಗಿ ಕಚೇರಿಗೆ ಹೋದಳು. ಇತ್ತೀಚೆಗೆ ಕಾರಿನಿಂದಾಗಿ ಯಾವುದೇ ತೊಂದರೆಯಾಗಿಲ್ಲ. ಆಕಸ್ಮಾತ್ ಆಫೀಸ್ ಟೆನ್ಷನ್‌ನಲ್ಲಿ ಅವಳು ಮರೆತರೆ ಕಾರು ಅವಳೊಂದಿಗೆ ಮಾತನಾಡುತ್ತದೆ. ಮೃದುವಾಗಿ ನೆನಪಿಸುತ್ತದೆ, ಮುಖ್ಯವಾಗಿ ಅವಳ ಗಂಡನ ಡ್ರೈವಿಂಗ್ ಉಪನ್ಯಾಸ ಕೇಳುವುದರಿಂದ ಅವಳನ್ನು ತಪ್ಪಿಸಿದೆ! ಇದು ಮಾಯಾಮಂತ್ರ ಅಲ್ಲ. ಇದು ಕನೆಕ್ಟೆಡ್ ಕಾರ್‌ಗಳ ಜಗತ್ತು. ಇದೆಲ್ಲ ಮಾನವನ ಸೃಜನಶೀಲತೆಯ ಹೊಸ ಅಧ್ಯಾಯ.

### ಕನೆಕ್ಟೆಡ್ ಕಾರು ಎಂದರೆ ಏನು?

ಆಟೊಮೊಬೈಲ್ ಇತಿಹಾಸದಲ್ಲಿ, ಕಾರುಗಳು ಮೂಕ ಒಡನಾಡಿಗಳಂತೆ ಇದ್ದವು. ಎಂಜಿನ್, ಚಕ್ರಗಳು ಇದ್ದರೂ ಅವು ಎಂದಿಗೂ

